# ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸ್ತ್ರೀವಾದಿ ಸಂವೇದನೆ

**ನಾಗರಾಜ ದಂಡೋತಿ**
ಸಹಾಯಕ ಪ್ರಾಧ್ಯಾಪಕ, ಶ್ರೀ ಗವಿಸಿದ್ಧೇಶ್ವರ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಕೊಪ್ಪಳ.

DOI: https://doi.org/10.5281/zenodo.18700522

**ABSTRACT:**

ಕನ್ನಡ ಸಾಹಿತ್ಯದ ದೀರ್ಘ ಇತಿಹಾಸದಲ್ಲಿ ಮಹಿಳಾ ಬರವಣಿಗೆಯು ನಡೆದುಬಂದ ಹಾದಿ ಮತ್ತು ಆಧುನಿಕೋತ್ತರ ಕಾಲಘಟ್ಟದಲ್ಲಿ ಅದು ಕಂಡುಕೊಂಡ ಸ್ತ್ರೀವಾದಿ ಸಂವೇದನೆಯ ವಿಶಿಷ್ಟ ಸ್ವರೂಪವನ್ನು ಇಲ್ಲಿ ಚರ್ಚಿಸಲಾಗಿದೆ. ಅತ್ತಿಮಬ್ಬೆ, ಅಕ್ಕಮಹಾದೇವಿಯರ ಐತಿಹಾಸಿಕ ಹಿನ್ನೆಲೆಯಿಂದ ಪ್ರಸ್ತುತ ಸ್ತ್ರೀವಾದಿ ನೆಲೆಗಳವರೆಗಿನ ಪಯಣವನ್ನು ಗುರುತಿಸುತ್ತಾ, ಪಿತೃಪ್ರಧಾನ ವ್ಯವಸ್ಥೆಯ ವಿರುದ್ಧದ ಪ್ರತಿರೋಧ, ಪುರಾಣಗಳ ಮರುಕಟ್ಟುವಿಕೆ ಮತ್ತು ಅಸ್ಮಿತೆಯ ಹುಡುಕಾಟವನ್ನು ವಿಶ್ಲೇಷಿಸಲಾಗಿದೆ. ಸ್ತ್ರೀವಾದವು ಕೇವಲ ಆಕ್ರೋಶಕ್ಕೆ ಸೀಮಿತವಾಗದೆ, ದೈಹಿಕ ಮತ್ತು ಮಾನಸಿಕ ಸ್ವಾತಂತ್ರ್ಯದ ಪರಿಕಲ್ಪನೆಗಳನ್ನು ಒಳಗೊಂಡಿದೆ. ವೈದೇಹಿ, ಸಾರಾ ಅಬೂಬಕ್ಕರ್ ಮುಂತಾದವರ ಬರಹಗಳನ್ನು ಉಲ್ಲೇಖಿಸುತ್ತಾ, ಜಾತಿ, ವರ್ಗ ಮತ್ತು ಧಾರ್ಮಿಕ ನೆಲೆಗಳಲ್ಲಿ ಮಹಿಳೆಯರ ಅನುಭವಗಳು ಹೇಗೆ ಭಿನ್ನವಾಗುತ್ತವೆ ಎಂಬುದನ್ನು ಪರಿಶೀಲಿಸಲಾಗಿದೆ. ಸ್ತ್ರೀ ಸಂವೇದನೆಯು ಏಕಶಿಲಾ ರೂಪದ್ದಲ್ಲ, ಬದಲಿಗೆ ಅದು ಸಾಂಸ್ಕೃತಿಕ ಬಹುತ್ವದ ನೆಲೆಗಳನ್ನು ಹೊಂದಿದೆ ಎನ್ನುವುದನ್ನು ಈ ಅಧ್ಯಯನವು ಸ್ಪಷ್ಟಪಡಿಸುತ್ತದೆ.

**KEYWORDS:**

ಕನ್ನಡ ಸಾಹಿತ್ಯ, ಸ್ತ್ರೀ ಸಂವೇದನೆ, ಮಹಿಳಾ ಬರವಣಿಗೆ, ಆಧುನಿಕೋತ್ತರ ಕಾಲ, ಸಾಂಸ್ಕೃತಿಕ ಬಹುತ್ವ.

ಸಾಹಿತ್ಯದ ಎರಡು ಸಾವಿರ ವರ್ಷಗಳ ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸಿದರೆ 20ನೆಯ ಶತಮಾನಕ್ಕೆ ಕಾಲಿರಿಸುವವರೆಗೆ ಮಹಿಳೆಯರೇ ರಚಿಸಿದ ಸಾಹಿತ್ಯ, ಮಹಿಳಾ ಸಾಹಿತ್ಯವೆಂಬ ಹೆಸರಿನಲ್ಲಿ ಗುರುತಿಸಬಹುದಾದಂಥದ್ದು ಹೆಚ್ಚು ಕಂಡುಬರುವುದಿಲ್ಲ. ಸ್ತ್ರೀಯರು ವಿದ್ಯೆಯಿಂದ ವಂಚಿತರಾದದ್ದು, ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಸಾರ್ವಜನಿಕ ಜೀವನದಲ್ಲಿ ಭಾಗಿಯಾಗುವ ಹೆಚ್ಚಿನ ಅವಕಾಶಗಳು ಸೃಷ್ಟಿಯಾಗದೇ ಹೋದದ್ದು, ಸ್ವಾತಂತ್ರ್ಯವಿರದ ಅವಲಂಬನೆಯ ಜೀವನವೇ ಪ್ರಧಾನವಾದದ್ದು – ಇಂಥ ಅನೇಕ ಕಾರಣಗಳಿಂದಾಗಿ ಮಹಿಳೆ ಕನ್ನಡ ಸಾಹಿತ್ಯದ ಮುಖ್ಯವಾಹಿನಿಯಲ್ಲಿ ಬಹುಕಾಲದವರೆಗೆ ಅನನ್ಯತೆಯನ್ನು ಕಂಡುಕೊಳ್ಳಲು ಸಾಧ್ಯವಾಗಲಿಲ್ಲ. ಇದಕ್ಕೆ ಅಲ್ಲೊಂದು ಇಲ್ಲೊಂದು ಅಪವಾದಗಳಿರಬಹುದು. ಗುರುತಿಸುವಂಥ ಸೃಜನಶೀಲತೆ ನಮಗೆ ಕಾಣುವುದು 20ನೆಯ ಶತಮಾನದಲ್ಲಿಯೇ ಎನ್ನಬಹುದು.

ಶಾತವಾಹನರ ಕಾಲದಿಂದಲೂ ಆಡಳಿತ, ರಾಜ್ಯಭಾರ ಇತ್ಯಾದಿ ಕ್ಷೇತ್ರಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವ ಶಕ್ತಿ ಸಾಮರ್ಥ್ಯಗಳನ್ನು ಪ್ರದರ್ಶಿಸಿದ ಕೆಲ ಮಹಿಳೆಯರು ಪ್ರತಿಭೆಗೆ ಉದಾಹರಣೆಯಾಗಿ ಕಾಣಸಿಗುತ್ತಾರೆ. ಬಾದಾಮಿ ಚಾಳುಕ್ಯ ಚಕ್ರವರ್ತಿ ಇಮ್ಮಡಿ ಪುಲಕೇಶಿಯ (ಸು. 610–42) ಎರಡನೆಯ ಮಗನಾದ ಚಂದ್ರಾದಿತ್ಯನ ಪ್ರಿಯ ಮಹಿಷಿ

'ವಿಜ್ಜಿಕೆ' ಎಂದು ಹೆಸರಾದ ವಿಜಯಮಹಾದೇವಿ ಸಂಸ್ಕೃತ ಪಂಡಿತೆಯೂ ಉತ್ತಮ ಕವಯಿತ್ರಿಯೂ ಆಗಿದ್ದು 'ಕೌಮುದೀ ಮಹೋತ್ಸವ' ಎಂಬ ಸಂಸ್ಕೃತ ನಾಟಕವನ್ನು ರಚಿಸಿದಳೆಂದು ತಿಳಿದುಬರುತ್ತದೆ. ಕನ್ನಡ ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ಸಾಂಸ್ಕೃತಿಕವಾಗಿ ಅತ್ತಿಮಬ್ಬೆ ಎಂಬ ಜೈನ ಮಹಿಳೆಯ ಹೆಸರು ಪ್ರಸಿದ್ಧವಾದದ್ದು. ಈಕೆ ಸಾವಿರದೈನೂರು ಜಿನ ಬಸದಿಗಳನ್ನು ನಿರ್ಮಿಸಿ, ಜಿನ ಪ್ರತಿಮೆಗಳನ್ನು ಮಾಡಿಸಿ 'ದಾನ ಚಿಂತಾಮಣಿ' ಎಂಬ ಬಿರುದು ಗಳಿಸಿದ್ದವಳು. ಕವಿ ರನ್ನನಿಂದ 'ಅಜಿತ ಪುರಾಣ' ಕಾವ್ಯವನ್ನು ಬರೆಸಿ, ಪೊನ್ನ ಬರೆದ 'ಶಾಂತಿಪುರಾಣ'ದ ಸಹಸ್ರ ಪ್ರತಿಗಳನ್ನು ಮಾಡಿಸಿ ದಾನ ಮಾಡಿದವಳು. ಸು. 1100 ರಲ್ಲಿದ್ದಳೆಂದು ಭಾವಿಸಲಾಗಿರುವ ಕಂತಿ (ನೋಡಿ) ಈಕೆಗೆ ಅದ್ಭುತ ಕವಿತಾ ಸಾಮರ್ಥ್ಯವಿತ್ತೆಂದೂ ಅಭಿನವ ವಾಗ್ದೇವಿ, ಅಧಿಕ ಕವೀಶ್ವರಿ ಇತ್ಯಾದಿ ಬಿರುದುಗಳಿದ್ದವೆಂದೂ 'ಕಂತಿ ಹಂಪನ ಸಮಸ್ಯೆಗಳು' ಎಂಬ ಕೃತಿಯನ್ನು ಬರೆದಿರುವಳೆಂದೂ ತಿಳಿದುಬರುತ್ತದೆ. ಕನ್ನಡದ ಮೊದಲ ಕವಯಿತ್ರಿಯಾಗಿರುವ ಅಕ್ಕಮಹಾದೇವಿ ವಚನ ಸಾಹಿತ್ಯ ಅಪ್ರತಿಮವಾದದ್ದು. ನಂತರ ಆಧುನಿಕ ಕಾಲಘಟ್ಟದಲ್ಲಿ ಸ್ತ್ರೀವಾದದ ನೆಲೆಯಲ್ಲಿ ಅಧಿಕ ಪ್ರಮಾಣದ ಸಾಹಿತ್ಯ ಆಧುನಿಕ ಸಾಹಿತ್ಯದಲ್ಲಿ ರಚನೆಯಾಗಿರುವುದನ್ನು ಗಮನಿಸಬಹುದು.

ನಂತರ ನೇರವಾಗಿ ನಾವು ಆಧುನಿಕೋತ್ತರ ಕಾಲಘಟ್ಟಕ್ಕೆ ಬಂದಾಗ ಅನೇಕ ಮಹಿಳಾ ಬರಹಗಾರರನ್ನು ಕಾಣಬಹುದು. ಮಹಿಳೆಯು ಶೋಷಣೆ, ದಬ್ಬಾಳಿಕೆ, ತುಳಿತ, ನಿರ್ಲಕ್ಷ್ಯಕ್ಕೆ ಒಳಗಾದ ನೆಲೆಗಳ ಪ್ರತಿಬಿಂಬಿಸುವ ಮತ್ತು ಬರವಣಿಗೆ ಮೂಲಕ ಪ್ರತಿರೋಧಿಸುವ ಸಾಹಿತ್ಯ ಪರಂಪರೆ ಹೆಚ್ಚಾಗುತ್ತ ಬಂದಿದ್ದು ಆಶಾದಾಯಕ ಬೆಳವಣಿಗೆ ಎಂದೇ ಭಾವಿಸಬಹುದು. ಮತ್ತು ಸ್ತ್ರೀಯು ಪುರುಷನ ಆಕ್ರಮಣಕ್ಕೆ, ಭೋಗಕ್ಕೆ ತುತ್ತಾದಾಗ ಪ್ರತಿರೋಧವು ಆಕ್ರೋಶದ ನೆಲೆಯಲ್ಲಿ ವ್ಯಕ್ತವಾಗುತ್ತದೆ ಎನ್ನುವುದನ್ನು ಸ. ಉಷಾ ಅವರ 'ಈ ನೆಲದ ಹಾಡು' ಕವಿತೆಯ ಸಾಲುಗಳಲ್ಲಿ ಕಾಣಬಹುದು. 'ಸ್ತ್ರೀತತ್ವ'ವಾದಿಗಳ ಸಿಟ್ಟು, ದ್ವೇಷ, ಒಳಗುದಿಗಳನ್ನು ನಿದರ್ಶಿಸಲು ಕೆಳಗಿನ ಎರಡು ಚರಣಗಳು ಸಾಕು:

**"ನನ್ನ ತಾಯೆಂದು, ಬಾಯೆಂದು**
**ಕೂಡ ಕರೆದು ಮೊಲಹಾಲ ಹೀರಿ ಬೆಳೆದ**
**ಕೃಷ್ಣ ಸಂತಾನವೇ, ಕಾಣಲಿಲ್ಲ ನಿಮಗೆ**
**ಮೊಲೆತೊಡೆಗಳ ಹೊರತಾಗಿ ಇನ್ನೊಂದು**
**ನಸುಗೆಂಪು ಆಸೆಗಳ ಹೊತ್ತ ಹೃದಯವುಂಟೆಂದು**
**ನಿನ್ನಮ್ಮ, ಅವಳಮ್ಮ ಅವಳಮ್ಮ**
**ಲಾಗಾಯ್ತಿನಿಂದ ಊದಿದ ಪುಂಗಿ ನೀನೂ**
**ಊದಬೇಡ, ಈಗ ತಾನೇ ಹೆಡೆಯಾಡಿಸುತ್ತಿದ್ದೇನೆ**
**ಯಾರನ್ನಾದರೂ ಕಚ್ಚಿ ವಿಷವಿಳಿಸಿಕೊಳ್ಳುತ್ತೇನೆ**
**ನನಗೆ ದಾರಿ ಬಿಡು!"**

ಮಹಿಳೆಯರು ಕೆಲವು ವಿಚಾರಗಳಲ್ಲಿ ಜಿದ್ದಿಗೆ ಬಿದ್ದವರಂತೆ ಪುರುಷರಿಗೆ ಸಮಾನವಾಗುವ ರೀತಿಯಲ್ಲಿ ಮುನ್ನಡೆಯುತ್ತಿರುವರು. ಕನ್ನಡ ಕಲಿ ಜಾಲತಾಣದ ವೈಚಾರಿಕ ಲೇಖನವೊಂದರಲ್ಲಿ ವಿವೇಕ ಬೆಟ್ಕುಳಿ ಅವರು ಹೇಳುವ ಮಾತುಗಳು ಇವು: "ಇತ್ತೀಚಿನ ದಿನಗಳಲ್ಲಿ ಕೆಲವು ಮಹಿಳೆಯರು ಕೆಲವು ವಿಚಾರಗಳಲ್ಲಿ ಜಿದ್ದಿಗೆ ಬಿದ್ದವರಂತೆ ಪುರುಷರಿಗೆ ಸಮಾನವಾಗುವ ರೀತಿಯಲ್ಲಿ ಮುನ್ನಡೆಯುತ್ತಿರುವರು. ಧೂಮಪಾನ, ಮದ್ಯಪಾನಗಳಲ್ಲಿ ನಗರ ಪ್ರದೇಶದಲ್ಲಿ ಅತಿ ಹೆಚ್ಚು ಶಿಕ್ಷಿತ ಮಹಿಳಾ ಸಮುದಾಯ ಪುರುಷರಿಗೆ ಸಮಾನವಾಗಿ ಮುಂದೆ ಬರುತ್ತಿರುವುದು. ಬೆಂಗಳೂರಿನಂತಹ ಮೆಟ್ರೋ ನಗರಗಳಲ್ಲಿ ಉದ್ಯೋಗ, ಶಿಕ್ಷಣದ

ಕಾರಣಕ್ಕಾಗಿ ಬರುವ ಸಾವಿರಾರು ಮಹಿಳೆಯರು ಮೋಜು ಮಸ್ತಿಯ ಹೆಸರಿನಲ್ಲಿ ಹೆಂಡದ ಹೊಳೆ ಹರಿಯುವ ರೇವ್ ಪಾರ್ಟಿಗಳಲ್ಲಿ, ಪಬ್‌ಗಳಲ್ಲಿ, ಕಚೇರಿಯ ಪಾರ್ಟಿಗಳಲ್ಲಿ ಪುರುಷರಿಗೆ ಸರಿಸಮಾನವಾಗಿ ಧೂಮಪಾನ, ಮದ್ಯಪಾನ ಹಾಗೂ ಡ್ರಗ್ಸ್ ಸೇವನೆಗಳಲ್ಲಿ ತೊಡಗಿರುವುದು ನಿಜಕ್ಕೂ ಆತಂಕದ ಸಂಗತಿ. ಈ ಹವ್ಯಾಸಗಳು ಯಾರಿಗೂ ಒಳ್ಳೆಯದಲ್ಲ. ಜೀವವನ್ನು ಸೃಷ್ಟಿಸುವ ಸಾಮರ್ಥ್ಯವಿರುವ ಮಹಿಳೆಯರೇ ಈ ಚಟಗಳಿಗೆ ಒಳಗಾದರೆ ತಾಯಿ ಹಾಗೂ ಮಗು ಎರಡಕ್ಕೂ ಅಪಾಯ. ಈ ಸತ್ಯವನ್ನು ಒಪ್ಪಿ ನಿರ್ಧಾರ ಮಾಡುವ ಅಗತ್ಯವಿದೆ.'' ಎನ್ನುವ ವಿಚಾರವು ನಮ್ಮ ಗಮನದಲ್ಲಿದೆ. ಆದರೂ ಸಹನೆಗೆ ಇನ್ನೊಂದು ಹೆಸರೇ ಮಹಿಳೆ. ಆ ಕಾರಣದಿಂದಲೇ ಹೆಚ್ಚಾಗಿ ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿ ಇನ್ನೂ ಸಂವೇದನಾಶೀಲತೆ ಇರುವುದು ಎಂದರೆ ತಪ್ಪಾಗಲಾರದು. ಮದುವೆಯಾಗಿ ಹೋದ ಗಂಡನ ಮನೆಯಲ್ಲಿ ಒಂದು ಹೆಣ್ಣಾಗಿ ಆ ಮನೆಯ ಮಗಳಾಗಿ ಜೀವನ ಸಾಗಿಸುವುದು ಹಿಂದಿನಿಂದ ನಡೆದು ಬಂದ ಪದ್ಧತಿಯಾಗಿದೆ. ಮಹಿಳೆಗೆ ಆ ಸಹನೆ ಇರುವ ಕಾರಣದಿಂದಲೇ ಎಷ್ಟೋ ಮದುವೆಯಾದ ಗಂಡಸರು ಸರಿದಾರಿಗೆ ಬಂದು ಜೀವನ ಸಾಗಿಸುತ್ತಿರುವುದನ್ನು ನಾವು ಕಾಣುವೆವು. ಆದರೆ ಇತ್ತೀಚಿನ ದಿನಗಳಲ್ಲಿ ಕೆಲಸದ ಒತ್ತಡ, ಯಂತ್ರಗಳ ಬಳಕೆ, ಮಾನಸಿಕ ದ್ವಂದ್ವ, ಗಂಡ–ಗಂಡನ ಮನೆಯವರಿಂದ ಸಿಗದ ಅಪೇಕ್ಷಿತ ಪ್ರೀತಿ ಈ ಕಾರಣಗಳಿಂದ ಮಹಿಳೆ ಸಹನೆಯನ್ನು ಕಳೆದುಕೊಳ್ಳುತ್ತಿರುವಳು. ``ಇಂದಿನ ಮಕ್ಕಳು ತಾಯಿಯ ಪ್ರೀತಿ, ಅಜ್ಜಿಯ ಮಮತೆಯಿಂದ ದೂರವಾಗುತ್ತಿರುವರು. ನಗರ ಮಹಾನಗರದಲ್ಲಿ ಹೆಚ್ಚಿನ ಮಹಿಳೆಯರನ್ನು ನೋಡಿಕೊಳ್ಳಲು ಹಳ್ಳಿಗಳಿಂದ ಬಂದ ಕೆಲಸದವರು ಇರುವರು. ಚಿಕ್ಕ ಮಕ್ಕಳೊಂದಿಗೆ ಅಗತ್ಯ ಸಮಯವನ್ನು ತಾಯಿಯಾದವಳು ಕಳೆಯುತ್ತಿಲ್ಲ. ಆ ಬಗ್ಗೆ ಚರ್ಚೆ ಆದರೆ ಗಂಡು–ಹೆಣ್ಣಿನ ಸಮಾನತೆಯ ಬಗ್ಗೆ ಚರ್ಚೆ ಆಗುವುದು. ಪರಿಣಾಮವಾಗಿ ತಾಯಿಗೆ ತನ್ನ ಮಗುವನ್ನು ನೋಡಿಕೊಳ್ಳಲು ಸಮಯ ಇಲ್ಲ. ಆದರೆ ಮನೆಯಲ್ಲಿನ ನಾಯಿಯನ್ನು ವಾಕಿಂಗ್ ಕರೆದುಕೊಂಡು ಹೋಗಲು ಗಂಡ–ಹೆಂಡತಿ ವೇಳೆಯನ್ನು ನಿಗದಿ ಮಾಡಿಕೊಂಡಿರುವುದು ವಿಪರ್ಯಾಸವಾಗಿದೆ. ಮೇಲೆ ತಿಳಿಸಿದ ಇಂತಹ ಕೆಲವು ಸಂದರ್ಭವನ್ನು ಹೊರತುಪಡಿಸಿ ಇಂತಹ ಹತ್ತಾರು ವಿಚಾರಗಳಲ್ಲಿ ಸಮಾನತೆ, ಸ್ವಾತಂತ್ರ್ಯ ಈ ವಿಚಾರಗಳನ್ನು ಇಟ್ಟು ಸಾಧಕ–ಬಾಧಕಗಳ ಬಗ್ಗೆ ಯೋಚಿಸುವ ಅಗತ್ಯವಿದೆ.''

ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ವಿಷಯವು ಬಹು ದೊಡ್ಡ ವ್ಯಾಪ್ತಿಯುಳ್ಳದ್ದು. ಈ ವಿಷಯವನ್ನು ಇಡೀ ಕನ್ನಡ ಸಾಹಿತ್ಯಕ್ಕೆ ಅನ್ವಯಿಸಿ ಮಾತನಾಡುವುದು ಬಹಳ ವಿಸ್ತಾರವಾಗುವುದು. ಕಾರಣ ಮಹಿಳೆಯರ ಬರವಣಿಗೆಗಳಲ್ಲಿ ವ್ಯಕ್ತವಾಗಿರುವ ಸ್ತ್ರೀ ಸಂವೇದನೆಗಳನ್ನು ವಿಚಾರ ಕುರಿತು, ಅದರಲ್ಲೂ ತಿರುಮಲಾಂಬ ಅವರಿಂದ ಹಿಡಿದು ವೈದೇಹಿಯವರ ತನಕ ನಿಟ್ಟಿನಲ್ಲಿ ಚರ್ಚೆಗಳು ನಡೆದಿದ್ದು ಅನಂತರದ ಬರಹಗಳನ್ನು ನೋಡಬೇಕಾದ ಅಗತ್ಯವನ್ನು ಇಲ್ಲಿ ಕಾಣುವ ಪ್ರಯತ್ನ ಇದಾಗಿದೆ. ಇದು ಸದ್ಯದ ವರ್ತಮಾನದಲ್ಲಿ ಬರೆಯುತ್ತಿರುವ ಸ್ತ್ರೀ ಲೇಖಕಿಯರ ಬರವಣಿಗೆಗಳ ಕುರಿತ ವ್ಯಾಪಕವಾದ ನೋಟವೆನ್ನಬಹುದು. ಇದು ಸಾಹಿತ್ಯದ ಓದಿಗೆ ಒಂದು ಸ್ತ್ರೀವಾದಿ ಶಿಸ್ತಿನ ಆಯಾಮ ಒದಗಿಸಿಕೊಡುತ್ತದೆ. ಸಾಹಿತ್ಯದ ಬಹುಮುಖೀ ಓದುಗಳಿಗೆ ಇದು ನಮ್ಮನ್ನು ಪರಿಚಯಿಸುವುದಾದರೂ ಸಾಕಷ್ಟು ಬಿಕ್ಕಟ್ಟುಗಳಿಗೂ ದಾರಿಮಾಡಿಕೊಟ್ಟಿದೆ. ಹೆಣ್ಣೆಂಬ ಜೀವಿಯ ಅಸ್ತಿತ್ವಕ್ಕೆ ಮಹತ್ವ ಕೊಟ್ಟು ಅವಳ ಜಗತ್ತನ್ನು ಪೂರ್ವಗ್ರಹ ಇಲ್ಲದೆ ಉದಾರವಾಗಿ ನೋಡುವ ಪ್ರಯತ್ನಗಳ ದಿಸೆಯಲ್ಲೇ ಸರಳೀಕರಣದ ಓದಿಗೆ ನಮ್ಮನ್ನು ಒಯ್ಯುವ ಅಪಾಯಗಳನ್ನು ತಂದೊಡ್ಡುತ್ತಿದೆ. ಈ ಅಪಾಯಗಳಲ್ಲಿ ಮೊದಲನೆಯದು ಸ್ತ್ರೀ ಅಸ್ಮಿತೆಯ ಏಕಶಿಲಾ ರೂಪದ

ಗ್ರಹಿಕೆ. ಬಹುಮುಖೀ ವ್ಯಕ್ತಿತ್ವಗಳ ಸಾಧ್ಯತೆಯನ್ನು ಅಳಿಸಿಹಾಕುವಂತದ್ದು. ಉದಾಹರಣೆಗೆ ಜಾತೀಯತೆಯಿಂದ ಕೂಡಿದ ನಮ್ಮ ಸಮಾಜದಲ್ಲಿ ಬ್ರಾಹ್ಮಣ ಸ್ತ್ರೀಯ ಅನುಭವಗಳು ದಲಿತ ಸ್ತ್ರೀಯ ಅನುಭವಗಳು ಭಿನ್ನವಾಗಿರಲು ಸಾಧ್ಯ. ಇದಲ್ಲದೆ ಜಾತಿಯೊಳಗೆ ಇರುವ ಉಪಜಾತಿ, ಮೇಲ್ವರ್ಗ, ಕೆಳವರ್ಗ, ಸಂಸ್ಕೃತಿ, ಬುಡಕಟ್ಟು ಸಂಸ್ಕೃತಿ – ಹೀಗೆ ಹಲವಾರು ವೈವಿಧ್ಯಗಳು ತುಂಬಿರುವ ಸಮಾಜದಲ್ಲಿ ಬದುಕುತ್ತಿರುವ ಮಹಿಳೆಯರ ಅನುಭವಗಳು ಏಕರೂಪವಾಗಿರುವುದಿಲ್ಲ. ಎರಡನೆಯದಾಗಿ ಪುರುಷ ಸಮಾಜದ ಲೋಪದೋಷಗಳ ಹಿನ್ನೆಲೆಯಲ್ಲಿ ಸ್ತ್ರೀಸಂವೇದಿಯಾದ ಪ್ರತಿಭಟನೆ ಹೊಮ್ಮುವ ಸಾಧ್ಯತೆಯಲ್ಲೂ ಸಾಮ್ಯತೆ ಇಲ್ಲ. ಸ್ತ್ರೀಯರ ಹೋರಾಟಗಳಲ್ಲಿ ಭಿನ್ನಸ್ತರಗಳಿವೆ; ಮುಖ್ಯವಾಗಿ ಅವು ಹೋರಾಟಗಳಾಗಿ ನಿರೂಪಿಸಲ್ಪಡುವುದು ಜಾತಿ, ವರ್ಗ, ಸಂಸ್ಕೃತಿ ನಿಶ್ಚಿತತೆಗಳಿಂದ. ಮೂರನೆಯದಾಗಿ, ಸ್ತ್ರೀಪರ ಪುರುಷ ದೃಷ್ಟಿಕೋನವು ಅತಿಯಾದ ಲಾಲನೆಯಿಂದ ಕೆಲವೊಮ್ಮೆ ನಾರ್ಸಿಸಿಸಂ (Narcissism) ವೈಕಲ್ಯಕ್ಕೂ ಒಳಗಾಗಬಹುದು.

ಸ್ತ್ರೀಯರ ಬರವಣಿಗೆಗಳು ಈ ಎಲ್ಲಾ ಅಪಾಯಕಾರಿ ಹಂತಗಳನ್ನು ಎದುರಿಸುತ್ತಲೇ ಬಂದಿದ್ದು, ಈಗ ಬರೆಯುತ್ತಿರುವ ಅನೇಕ ಬರಹಗಾರ್ತಿಯರು ಈ ಸವಾಲುಗಳನ್ನು ಎದುರಿಸಿ ನಿಂತಿದ್ದಾರೆ. ಕ್ರಿಯಾಶೀಲವಾಗಿ ಅಭಿವ್ಯಕ್ತಿಸಿ ಸಂವೇದನೆಗಳನ್ನು ರೂಪಿಸಿಕೊಂಡ ಈ ಬರಹಗಾರ್ತಿಯರಲ್ಲಿ ಬಹುತ್ವದೆಡೆಗೆ ತುಡಿಯುವ ಕಾತುರ ಇರುವುದು ಕಾಣತೊಡಗಿದೆ. ಇದೊಂದು ಆಶಾದಾಯಕ ಸೂಚನೆ ಮತ್ತು ಸಾಹಿತ್ಯದ ಮಟ್ಟಿಗೆ ಒಂದು ಹೊಸ ಮಜಲು ಎನ್ನುವಂತಿದೆ. ಸ್ತ್ರೀ ಸಂವೇದನೆಯ ನೆಲೆಗಳನ್ನು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಗುರುತಿಸುವಾಗ ಸಹಜನೆಲೆಗೆ ಎಂದೂ ಪ್ರಜ್ಞಾಪೂರ್ವಕ ನೆಲೆ ಎಂದೂ ವಿಶಾಲಾರ್ಥದಲ್ಲಿ ವಿಂಗಡಿಸಿಕೊಳ್ಳಬಹುದು. ಸ್ತ್ರೀ ಸಂವೇದನೆಗಳೆನ್ನುವುದು ಬದುಕಿನ ಸಹಜ ಅನುಭವಗಳಾಗಿ ಬಂದಾಗ ಸಹಜ ನೆಲೆಯವು ಎನ್ನಬಹುದೇನೋ.

ಸ್ತ್ರೀ ಸಂವೇದನೆ ಎನ್ನುವುದು ಸ್ತ್ರೀವಾದ ಹುಟ್ಟಿದ ನಂತರದ ಪರಿಕಲ್ಪನೆಯೇನೋ ಅಲ್ಲ. ಇದಕ್ಕಾಗಿ ಮೌಖಿಕ ಪರಂಪರೆಯ ಕಡೆ ನೋಡಬೇಕು. ಅಲ್ಲಿನ ಬಹುಮುಖತ್ವ, ಕ್ರಿಯಾಶೀಲತೆ – ಎಲ್ಲವೂ ಮೇಲೆ ಎದ್ದು ಕಾಣುವುದಿಲ್ಲ. ಬಾಯಿಂದ ಬಾಯಿಗೆ ಹರಿದಾಡುವಾಗ ಅಲ್ಲಿ ಪುನರ್‌ರಚನೆಗಳೂ, ಹಲವು ರೀತಿಯ ವಿನ್ಯಾಸಗಳೂ ಸಾಧ್ಯವಿದೆ. ಲಯದಲ್ಲಿ ಹಾಗೂ ಕಾಕು ಅಥವಾ ಸ್ವರವನ್ನು ಹಿಂಜುವುದರಲ್ಲಿ ಇವು ಹೊಳೆಯಿಸುತ್ತವೆ. ಫೋಕಸ್ ಆಗುವ ರೀತಿಗಳೂ ಭಿನ್ನವಾಗಿರುತ್ತವೆ. ಮೌಖಿಕ ಸಂಪ್ರದಾಯವು ಅನುಭವ ಕಥನಗಳನ್ನು ರೂಪಿಸಿಕೊಳ್ಳುವ ರೀತಿಯಲ್ಲಿದ್ದು, ಹಾಡು, ಕತೆ, ಒಗಟುಗಳ ಮೂಲಕ ಅವನ್ನು ಕಟ್ಟಿಕೊಡುವ ಸಾಮರ್ಥ್ಯ ಹೊಂದಿದಂತವು. ಈ ಒಡೆದು ಕಟ್ಟುವ ಕ್ರಿಯಾಶೀಲತೆಗಳು ಮಹಿಳೆಯರ ದನಿಗಳಲ್ಲೇ ಹೆಚ್ಚಾಗಿ ಕಾಣುತ್ತದೆ. ಮಹಿಳೆಯರ ಜಾನಪದ ಅಭಿವ್ಯಕ್ತಿಯು ಸಹಜಾನುಭವಗಳಿಗೆ ಹತ್ತಿರವಿದೆ. ಇನ್ನೊಬ್ಬ ಚಿಂತಕ ಆಶಿಶ್ ನಂದಿ ಗುರುತಿಸುವಂತೆ, ಭಾರತದಲ್ಲಿ ಸ್ಪರ್ಧಾತ್ಮಕತೆ, ಆಕ್ರಮಶೀಲತೆ, ಬಲ, ಕ್ರಿಯಾಶೀಲತೆ ಇವುಗಳು ಸ್ಪಷ್ಟವಾಗಿ ಪುರುಷಾತ್ಮಕವಲ್ಲ. ಹಾಗೆ ನೋಡಿದರೆ ಭಾರತೀಯ ಜಾನಪದಗಳಲ್ಲಿ ಈ ಗುಣಗಳು ಅಷ್ಟೇ ಮಟ್ಟಿಗೆ ಸ್ತ್ರೀ ಸಂಬಂಧಿಯಾಗಿವೆ. ಜಾನಪದ ಸೀತೆ ರಾವಣನ ಚಿತ್ರ ಬಿಡಿಸುವುದು, ದುರ್ಯೋಧನನಿಗೆ ದ್ರೌಪದಿ ಜೂಜಿನಲ್ಲಿ ಸವಾಲೆಸೆಯುವುದು ಇವು ಶಕ್ತ ಹಾಗೂ ಸಹಜ ವ್ಯಕ್ತಿತ್ವಗಳನ್ನು ಅನಾವರಣಗೊಳಿಸುವಂತೆ, 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿನ ಚಿನ್ನಮರಿ, ಪೀಂಚಲು, 'ಬನದ ಕರಡಿ'ಯಂತಹ ಅವ್ವಂದಿರು (ಲಂಕೇಶ್ : 'ಅವ್ವ'), ತನ್ನನ್ನು ಕಂಡರೆ 'ಯಮದೂತರು ಓಡೋಯ್ತರ' – ಎನ್ನುವ ಸಾಕವ್ವ ಹೀಗೆ ಹಲವಾರು ಮಹಿಳೆಯರು

ಸಹಜ ಗುಣಗಳಿಂದ ಕೂಡಿ ಪ್ರಕೃತಿಗೆ ಹತ್ತಿರವಿದ್ದಾರೆ.

ಇನ್ನು ಲಿಖಿತ ಸಾಹಿತ್ಯ ರಚನೆಯಲ್ಲಿ ಹೆಣ್ಣು ಬರವಣಿಗೆ ಎನ್ನುವುದು ತೆರೆದುಕೊಂಡಿದ್ದೇ 12ನೇ ಶತಮಾನದಲ್ಲಿ. ಅಲ್ಲೂ ಚಳವಳಿಯ ಬೆಂಬಲ ಇದ್ದುದರಿಂದ ಸ್ತ್ರೀಯರ ಅಭಿವ್ಯಕ್ತಿ ಪ್ರಕಟವಾಗಿದೆ. ಅಕ್ಕಮಹಾದೇವಿ ಮತ್ತಿತರ ವಚನಕಾರ್ತಿಯರನ್ನು ಇಲ್ಲಿ ನಾವು ಗುರುತಿಸುತ್ತೇವೆಯಾದರೂ ಅದು ಲಿಂಗಸಮಾನತೆಯ ದೃಷ್ಟಿಯಿಂದ ಔಪಚಾರಿಕವಾಗಿ ಈ ಕೆಲಸ ನಡೆದಿದೆ ಎನ್ನಿಸುತ್ತದೆ. ಏಕೆಂದರೆ ಅಕ್ಕಮಹಾದೇವಿಯನ್ನು ಬಿಟ್ಟರೆ ಬೇರೆ ವಚನಕಾರ್ತಿಯರನ್ನು ಸ್ಥೂಲವಾಗಿ ಅಭ್ಯಾಸ ಮಾಡಲಾಗುತ್ತದೆಯೇ ವಿನಾ ಅವರ ಸಾಹಿತ್ಯ ಚರ್ಚೆಯಾಗಿದ್ದು ಕಡಿಮೆ ಎಂದೇ ಹೇಳಬೇಕು. ಅಕ್ಕಮಹಾದೇವಿಯೂ ಒಂದು ಹಂತದಲ್ಲಿ ಪುರುಷ ಪ್ರಧಾನ ನೆಲೆಯಿಂದ ಪ್ರಶ್ನಿಸಲ್ಪಟ್ಟವಳೇ ಆಗಿದ್ದಾಳೆ – ಹಾಗಾಗಿ ಆಕೆಗೆ 'ಹೆಂಗೂಸಲ್ಲ' ಎಂದು ಹೇಳಿಕೊಳ್ಳುವ ಅನಿವಾರ್ಯತೆ ಉಂಟಾಗಿರಬಹುದು. ಮೌಖಿಕ ಪರಂಪರೆಗೆ ಹತ್ತಿರವಿದ್ದ ಅಕ್ಕನ ಅಭಿವ್ಯಕ್ತಿ ಮಾರ್ಗಗಳು ಮತ್ತೆ ಮುಂದುವರಿದಂತೆ ಕಾಣುವುದಿಲ್ಲ.

ಹತ್ತನೆಯ ಶತಮಾನದಿಂದ ಇತ್ತೀಚಿನ ಜನಪ್ರಿಯ ಸಾಹಿತ್ಯದವರೆಗೂ ಈ ಚಿತ್ರಣವನ್ನೇ ಕಟ್ಟಿಕೊಡಲಾಗಿದೆ. ತ್ಯಾಗಭೋಗಗಳನ್ನು ಮೌಲ್ಯಗಳಾಗಿ ಒಪ್ಪಿಕೊಂಡಿದ್ದ ಕಾಲದಲ್ಲಿ ಬದುಕಿದ್ದ ಅತ್ತಿಮಬ್ಬೆಯನ್ನು 'ದಾನ ಚಿಂತಾಮಣಿ'ಯಾಗಿ ಚಿತ್ರಿಸಲ್ಪಡುತ್ತಾಳೆ. ಇದು ಅವಳ ವ್ಯಕ್ತಿತ್ವದ ಧನಾತ್ಮಕ ಅಂಶವೆಂಬಂತೆ ಕಂಡರೂ ಜೈನರಲ್ಲಿ ಸ್ತ್ರೀಯರಿಗೆ ಮೋಕ್ಷ ಇಲ್ಲದ ಕಾರಣ ತನ್ನನ್ನು ತಾನು ದಾನಧರ್ಮಗಳಲ್ಲಿ ತೊಡಗಿಸಿಕೊಂಡು ಸ್ತ್ರೀಜನ್ಮ ಕಳೆದುಕೊಂಡು, ಆ ಪುಣ್ಯದಿಂದ ಗಂಡಸಾಗಿ ಹುಟ್ಟುವ ಅನಿವಾರ್ಯತೆಯನ್ನು ಅವಳು ತೋರಿಸಿದಂತಾಗುತ್ತದೆ. ತಮ್ಮ ಸರದಿಗಾಗಿ ಕಾಯುವ ರಾಣಿಯರು ಗಂಡನನ್ನು ಕಾಣಲು, ಕೂಡಲು (ವಡ್ಡಾರಾಧನೆ) ಹಾದರ ಮಾಡಿದ್ದಕ್ಕಾಗಿ ಹುಳಬಿದ್ದು ಸಾಯುವ ಅಮೃತಮತಿ (ಯಶೋಧರಚರಿತ್ರೆ) ಇವರೆಲ್ಲರು ಪುರುಷ ಸಮಾಜದ ನಿರೀಕ್ಷೆಗನುಗುಣವಾಗಿ ರೂಪಿಸಲ್ಪಟ್ಟಂತಹ ಮಾದರಿಗಳೇ ಆಗಿದ್ದಾರೆ. 'ಹದಿಬದೆಯ ಧರ್ಮ' ಬೋಧಿಸುವ ಹೊನ್ನಮ್ಮ, ಅ.ನ.ಕೃ ಕಾದಂಬರಿಯ ಗೃಹಲಕ್ಷ್ಮಿಯರು ಮತ್ತು ವೇಶ್ಯೆಯರು, ಸಂಸ್ಕಾರದ ಚಂದ್ರಿ, ಬೆಳ್ಳಿಯರು ಸ್ಥಿರೀಕರಣದ ಪಾತ್ರಗಳೇ ಆಗಿ 'ಸತೀ – ಸೂಳೆ'ಯರ ಮಾದರಿಗಳನ್ನು ತೋರಿಸುವಂತಿದ್ದಾರೆ. ಲೇಖಕಿಯರ ಪ್ರಜ್ಞಾಪೂರ್ವಕ ಸಂವೇದನೆಗಳು ರೂಪುಗೊಳ್ಳುತ್ತ ಹೋದಂತೆ, ಅವರು ಅಭಿವ್ಯಕ್ತಿಯಾಗಿ ಹಲವಾರು ಮಾರ್ಗೋಪಾಯಗಳನ್ನು ಹುಡುಕಿಕೊಳ್ಳಲಾರಂಭಿಸಿದ್ದರು. ಅವುಗಳಲ್ಲಿ ಮುಖ್ಯವಾಗಿ ಮಿತ್‌ಗಳನ್ನು (Myths) ಒಡೆದು ಕಟ್ಟಬೇಕಾದ ಅನಿವಾರ್ಯತೆ, ಕಾಮವನ್ನು ಸಮಾಜ ನಿರ್ದೇಶಿಸುವ ರೀತಿಗಳಿಂದ ಭಿನ್ನವಾಗಿ ವಿವೇಚಿಸುವುದು, ಅಪ್ಪ, ಅಮ್ಮ ಇಂತಹ ಬಿಂಬಗಳಿಂದ, ಹಾಗೂ ತಾಯ್ತನದಂತಹ ಜೈವಿಕ ರಚನೆಗಳನ್ನು ಮುಕ್ತವಾಗಿ ನೋಡುವುದಲ್ಲದೆ, ಅವುಗಳನ್ನು ಸಂದೇಹಿಸುವುದು, ಸ್ವಲ್ಪಮಟ್ಟಿಗೆ ಸಾಹಿತ್ಯವನ್ನು ಕ್ರಿಯಾವಾದಕ್ಕೆ ಹತ್ತಿರ ಕೊಂಡೊಯ್ಯುವುದು ಇತ್ಯಾದಿ.

ಮೊದಲನೆಯದಾಗಿ ಮಿತ್‌ಗಳನ್ನು ಎದುರಿಸುವ ದೃಷ್ಟಿಕೋನ ಅಪ್ರಧಾನವಾಗಿದ್ದ ಸ್ತ್ರೀ ಪಾತ್ರಗಳನ್ನು ಹೆಕ್ಕುವುದು, ಪುರಾಣ ಪ್ರಸಿದ್ಧವಾದ ಸ್ತ್ರೀ ವ್ಯಕ್ತಿತ್ವಗಳನ್ನು ಮಾನವೀಯ ನೆಲೆಯಲ್ಲಿ ನೋಡುವ ಪ್ರಯತ್ನ, ಇತ್ಯಾದಿ ಅಂಶಗಳು ಇಲ್ಲಿ ಗಮನಾರ್ಹವಾಗುತ್ತವೆ. ಸೀತೆ, ದ್ರೌಪದಿ, ದಮಯಂತಿ, ಮಾಧವಿ – ಈ ಪಾತ್ರಗಳನ್ನು ಪುನರ್ ಕಟ್ಟಿಕೊಳ್ಳುವಿಕೆಯು ಸಂಭವಿಸಿದ್ದು ಈ ಹಂತದಲ್ಲಿಯೇ. ಎಚ್.ವಿ. ಸಾವಿತ್ರಮ್ಮನವರ 'ದಮಯಂತಿ', ಅನುಪಮಾ ಅವರ 'ಮಾಧವಿ' ಕಾದಂಬರಿಗಳು ಈ ನಿಟ್ಟಿನಲ್ಲಿವೆಯಾಗಿ ಅವನ್ನು ಇಲ್ಲಿ ಉದಾಹರಿಸಬಹುದು. ಕಾಮದ ಪರಿಕಲ್ಪನೆಯೂ ಸಹ ನಮಗೆ ಸಮಾಜದಿಂದಲೇ ನಿರ್ದೇಶಿತವಾಗುತ್ತದೆ. ಅದು ಸಹಜ

ಗುಣವಾಗಿದ್ದರೂ ಸಹ ಅದು ಪುರುಷನಿಗೆ ಸ್ತ್ರೀಗೆ ಬೇರೆಬೇರೆಯಾಗಿ ಒದಗುತ್ತದೆ.

ದೇಹದ ನಿರ್ಬಂಧಗಳು ಸಮಾಜದಿಂದ ವಿಧಿಸಲ್ಪಡುತ್ತವೆ. ಸಮಾಜವು ಪುರುಷ ಕೇಂದ್ರವಾಗಿದ್ದು ಲೈಂಗಿಕತೆಯನ್ನು ನಿರ್ಧರಿಸುವುದು ಅದರ ತೆಕ್ಕೆಯಲ್ಲಿರುವುದರಿಂದ ಪುರುಷರಿಗೆ ಸಹಜವಾದ ಕಾಮವನ್ನು ನಿರಾಕರಿಸುತ್ತದೆ. ಇದನ್ನು ಅನೇಕ ಬರಹಗಾರ್ತಿಯರು ಪ್ರತಿರೋಧದ ನೆಲೆಯಲ್ಲಿ ಗ್ರಹಿಸುತ್ತಾರೆ. ಬಂಧಕ್ಕೆ ವಿರೋಧವಾಗಿ ಮುಕ್ತತೆಯನ್ನು ಬಿಂಬಿಸುವಲ್ಲಿ ಸ್ವಲ್ಪಮಟ್ಟಿನ ಪ್ರತಿರೋಧವನ್ನು ಕಾಣಬಹುದು. ಇದೊಂದು ಪ್ರತಿಭಟನೆಯ ಕ್ರಮವೂ ಆಗಿದೆ. ಹಾಗಾಗಿ ನಮ್ಮ ಅನೇಕ ಕವಯಿತ್ರಿಯರಿಗೆ ಅಕ್ಕಮಹಾದೇವಿ ನಿರ್ವಸ್ತ್ರಳಾಗಿರುವುದು ಪ್ರತಿಭಟನೆಯ ದ್ಯೋತಕ ಹಾಗೂ ಸ್ವಾತಂತ್ರ್ಯದ ರೂಪಕವೂ ಹೌದು. ಹಾಗೆಯೇ ಅಮೃತಮತಿ ತನ್ನಿಚ್ಛೆಯಂತೆ ಕಾಮವನ್ನು ಪಡೆಯುವ ಸ್ವತಂತ್ರ ಮನೋಭಾವವುಳ್ಳವಳಾಗಿ ಅವಳೂ ಹಲವಾರು ಬರಹಗಾರ್ತಿಯರಿಗೆ ರೂಪಕವಾಗಿದ್ದಾಳೆ. ಪ್ರತಿಭಾ ನಂದಕುಮಾರ್, ಮಲ್ಲಿಕಾ ಘಂಟಿ, ಶಶಿಕಲಾ ವೀರಯ್ಯಸ್ವಾಮಿ, ಗೀತಾ ನಾಗಭೂಷಣ ಇನ್ನೂ ಹಲವಾರು ಲೇಖಕಿಯರಲ್ಲಿ ಈ ರೀತಿಯ ಪ್ರತಿಭಟನೆಯ ದನಿಗಳಿವೆ. ವೀಣಾ ಶಾಂತೇಶ್ವರರ ಕತೆಗಳಲ್ಲೂ ಕೆಲಮಟ್ಟಿಗೆ ಈ ಅಂಶ ಕಾಣಬಹುದು. ಆದರೆ ಕವಿತೆಗಳಲ್ಲಿ ಈ ಅಂಶ ಇನ್ನೂ ಹೆಚ್ಚು ಸ್ಪಷ್ಟವಾಗಿ ಕಾಣುತ್ತದೆ. ಈ ಪ್ರಜ್ಞಾಪೂರ್ವಕ ನೆಲೆಯಲ್ಲಿ ಗಮನಿಸಬಹುದಾದ ರೀತಿಯೆಂದರೆ ಅಪ್ಪ – ಅಮ್ಮಂದಿರಂತಹ ಬಿಂಬಗಳನ್ನು ಅಧಿಕಾರ ಕೇಂದ್ರಗಳಾಗಿ ನೋಡುವುದು, ಇವನ್ನು ಕೆಡವಿ ಕಟ್ಟುವ ಹಂತದಲ್ಲಿ ಆತ್ಮ ನಿರೀಕ್ಷೆಯೂ ಸ್ವಲ್ಪಮಟ್ಟಿಗೆ ಇದೆ. ಹಲವಾರು ಬರಹಗಾರ್ತಿಯರು (ಅದರಲ್ಲೂ ಕವಯಿತ್ರಿಯರು) ಎದುರುಗೊಳ್ಳುವ ಅಮ್ಮನ ಬಿಂಬವು ಸಾಂಪ್ರದಾಯಿಕ ಪುರುಷ ಸಮಾಜವನ್ನೇ ಹೋಲುತ್ತದೆ. ಸ. ಉಷಾ ಕವಿತೆಯ ಸಾಲುಗಳನ್ನು ನೋಡಬೇಕು:

**"ನಿನ್ನಮ್ಮ ಅವಳಮ್ಮ ಅವಳಮ್ಮ**
**ಲಾಗಾಯ್ತಿನಿಂದ ಊದಿದ ಪುಂಗಿ ನೀನೂ**
**ಊದಬೇಡ । ಈಗ ತಾನೇ ಹೆಡೆಯಾಡಿಸುತ್ತಿದ್ದೇನೆ**
**ಯಾರನ್ನಾದರೂ ಕಚ್ಚಿ ವಿಷವಿಳಿಸಿಕೊಳ್ಳುತ್ತೇನೆ**
**ನನಗೆ ದಾರಿ ಬಿಡು....."**

ಈ ಬಗೆಯ ಆಕ್ರೋಶ ಮತ್ತು ಲೈಂಗಿಕ ಆಸೆಗಳ ಅಭಿವ್ಯಕ್ತಿ ಗಮನಾರ್ಹವಾಗಿದೆ. ಸೀರೆಯನ್ನು ಬಂಧನದ ಸಂಕೇತವಾಗಿ ನೋಡಿ ತಿರಸ್ಕರಿಸುವುದನ್ನೂ ಇದೇ ಬಗೆಯ ಅಭಿವ್ಯಕ್ತಿಯ ಗುಂಪಿಗೆ ಸೇರಿಸಬಹುದು. ಇವು ಎಲ್ಲವೂ ಪ್ರಜ್ಞಾಪೂರ್ವಕ ಸಂವೇದನೆಗಳಾಗಿಯೇ ಒದಗಿವೆ ಎನ್ನುವುದಿಲ್ಲಿ ಮುಖ್ಯ ಅಂಶ.

ಇದರ ಜೊತೆ ಜೊತೆಗೆ ನಾಟಕೀಯವಾಗಿ ಕಾಣುವ ಸಂಗತಿಯೆಂದರೆ ಅನೇಕ ಬರಹಗಾರ್ತಿಯರು ತಮ್ಮನ್ನು ಸ್ತ್ರೀವಾದದ ಉಗ್ರಬಂಡಾಯ ಸ್ವರೂಪಗಳ ಅಸ್ಮಿತೆಯಲ್ಲಿ ಗುರುತಿಸಿಕೊಳ್ಳಲು ನಿರಾಕರಿಸಿದ್ದು. ಸ್ತ್ರೀ ಅಸ್ಮಿತೆಯೆನ್ನುವುದನ್ನು ವಾಚ್ಯವಾಗಿ ನೋಡಲು ಬಯಸದೇ ಇರುವ ಹಲವಾರು ಲೇಖಕಿಯರು ತಮ್ಮನ್ನು ತಾವು 'ಸ್ತ್ರೀತ್ವದ' ವಿಶಿಷ್ಟತೆಯಲ್ಲಿ ಗುರುತಿಸಿಕೊಳ್ಳುತ್ತಾರೆ. ಇದೂ ಕೂಡ ಪ್ರಜ್ಞಾಪೂರ್ವಕ ನೆಲೆಯೇ ಆಗಿದೆ. ಏಕೆಂದರೆ, ಸ್ತ್ರೀ ಎನ್ನುವ ಅರಿವು ಬೆನ್ನಿಗಿದ್ದು ವ್ಯಕ್ತಿವಿಶಿಷ್ಟತೆಯಲ್ಲಿ ಅದನ್ನು ನಿಜಗೊಳಿಸಿಕೊಳ್ಳುವ ಹಂಬಲ ಇಲ್ಲಿದೆ. ಸ್ತ್ರೀಯರ ಏಕಾಂತ ಲೋಕವು ಆಪ್ತವಾಗಿ ತೆರೆದುಕೊಳ್ಳುತ್ತ ಹೋದಂತೆ, ಅವರದೇ ಆದ ಜಾಗ, ಜಗತ್ತುಗಳ ಇರುವು ಕೂಡ ತೆರೆದುಕೊಂಡಿತು. 'ಹೆಣ್ಣಿನ ಚೀಲವನ್ನು ತೆಗೆದು ನೋಡಬಾರದು' ಎಂದು ಹೇಳುವ ಮೂಲಕವೇ ಸ್ತ್ರೀ ಖಾಸಗಿತನದ ಲೋಕವೊಂದು ಇದೆ

ಎಂದು ತಿಳಿಯುವಂತೆ ಮಾಡುವುದನ್ನು ಇಲ್ಲಿ ಕಾಣಬಹುದು.

ವೈದೇಹಿಯವರ ಕಥನಗಳಲ್ಲಿ ಕಾಣುವ ಸ್ತ್ರೀ ಲೋಕ ತನ್ನ ವ್ಯಕ್ತಿವಿಶಿಷ್ಟತೆಗಳಿಂದಲೇ ಆಪ್ತವಾಗುವ ಧಾಟಿಯಲ್ಲಿ ನಿರೂಪಿತವಾಗಿವೆ. ಪುರುಷ ಪ್ರಧಾನ ಸಮಾಜವನ್ನು ಎದುರಿಸುವಾಗ ತನ್ನತನವನ್ನು ಕಾಪಿಟ್ಟು, ಪೋಷಿಸಿಕೊಳ್ಳುವ ಹೆಣ್ಣುಗಳು ವೈದೇಹಿಯವರ ಕಥನಗಳಲ್ಲಿದ್ದಾರೆ. ಅದರ ಮೂಲಕ ವೈದೇಹಿಯವರ ಪ್ರಬಂಧವೊಂದರಲ್ಲಿ ಕಾಣುವ ಅಜ್ಜಯ್ಯನ 'ಈಸಿಛೇರು' ಕಂಬದ ಹಿಂದಿನಿಂದ ನಿಂತು ನೋಡುವ ಕಣ್ಣುಗಳಿಗೆ ಕಾಣುವ ರೀತಿ ಅಧಿಕಾರ ಸ್ವರೂಪದ್ದಾಗಿ ಕಾಣುತ್ತದೆ. 'ಸೌಗಂಧಿಯ ಸ್ವಗತಗಳು' ಕಥೆಯ ನಾಯಕಿಗೆ ತನ್ನತನದ ಅರಿವು ಸ್ಪಷ್ಟವಾಗಿದೆಯಾದರೂ ಅವಳು ಹೋರಾಟಗಾರ್ತಿಯಾಗಿ ಬರುವುದಿಲ್ಲ. ದೇಹವಾಂಛೆಯ ಬಗ್ಗೆ ತಿಳಿಸುವ ಮಹಿಳಾ ಪಾತ್ರಗಳು ಆಕ್ರೋಶದ ದನಿಯಲ್ಲಿ ಮಾತನಾಡುವುದಿಲ್ಲ ಎನ್ನುವುದೇ ಈ ನೆಲೆಯ ವಿಶಿಷ್ಟತೆಯಾಗುತ್ತದೆ. ಹೆರಿಗೆ, ಮುಟ್ಟು, ಕಾಮ, ಪ್ರೇಮಗಳು ಸಹಜತೆಯ ನೆಲೆಯಲ್ಲಿ ಒಪ್ಪಿತವಾಗುತ್ತವೆ ಮತ್ತು ತಮ್ಮದೇ ಆದ ಸ್ತ್ರೀ ಲೋಕವನ್ನು ತೆರೆದಿಡುತ್ತವೆ.

ಸ್ತ್ರೀ ಸಂವೇದನೆಯೆನ್ನುವುದು ಪುರುಷನಿಗೆ ಸಮಾನಾಂತರವಾಗಿ ಸವಾಲುಗಳನ್ನು ರೂಪಿಸುವುದಿಲ್ಲ. ಅದು ನಿತ್ಯದ ಅನುಭವಗಳಿಂದಲೇ ಆಗಿದೆ. ಇವನ್ನು ಬರಹದ ಮೂಲದ್ರವ್ಯವಾಗಿ ಬಳಸಿಕೊಳ್ಳಲಾಗಿದೆ. ಅನುಭವವು ಅಡುಗೆಮನೆಯದ್ದೇ ಆದರೂ, ಅದರ ಶೋಧನೆಯ ದಿಕ್ಕು, ದೆಸೆಗಳೆಲ್ಲ ಗಂಭೀರವಾದವು. ಸುನಂದಾ ಪ್ರಕಾಶ ಕಡಮೆಯವರ ಕತೆಯೊಂದರ ಹೆಸರೇ, 'ಕಿಚಣ್ ಪ್ಯಾರಡೈಸ್' ಎಂದಾಗಿದೆ. ಅಲ್ಲಿ ದೊಡ್ಡ ದೊಡ್ಡ ಅನುಭವಗಳನ್ನು ಮೀಟುವುದು ಅಡುಗೆಯ ಪರಿಕರಗಳೇ. ಅನುಭವಗಳೆಂದರೆ ಹಿಮಾಲಯ ಹುಡುಕಿಕೊಂಡು ಹೋಗಿ ಅದನ್ನು ಹತ್ತುವುದಲ್ಲ; ಅವು ನಮ್ಮ ಸುತ್ತಲೇ ಸಿಗುವಂತವು, ಅವುಗಳ ಸತತ ಸಾತತ್ಯದಿಂದ ಆಗುವಿಕೆ, ವಿಶಿಷ್ಟತೆ ಸಾಧ್ಯ ಎಂಬ ನೆಲೆ ಇದಾಗಿದೆ. ಆದರೆ ಈಗಿನ ರಚನೆಗಳನ್ನು ನೋಡಿದಾಗ ಕಥಾನಕಗಳನ್ನು ರೂಪಿಸುವುದು ಒಂದು ತೆರೆದುಕೊಳ್ಳುವ ರೀತಿಯನ್ನು ಇನ್ನೂ ಹೆಚ್ಚು ಸ್ಪಷ್ಟಗೊಳಿಸುತ್ತಿದೆ ಎನ್ನಿಸುತ್ತದೆ. ಅವುಗಳಲ್ಲಿ ವೈಜ್ಞಾನಿಕ ಬರಹಗಳು, ಮಹಿಳಾ ವಿಜ್ಞಾನಿಗಳ ಆತ್ಮಕಥೆ, ಜೀವನ ಚರಿತ್ರೆ, ಪ್ರವಾಸ, ಅನುಭವ ಕಥನ, ವೈದ್ಯಕೀಯ ಬರಹಗಳಲ್ಲಿ ಕಥಾನಕದ ಸೃಜನಶೀಲ ನೆಲೆಗಳು ಅರಳುತ್ತಿವೆ. ನೇಮಿಚಂದ್ರ, ದು. ಸರಸ್ವತಿ, ಪಾರ್ವತಮ್ಮ ಮಹಾಲಿಂಗಶೆಟ್ಟಿ, ಎಚ್. ನಾಗವೇಣಿ, ಸವಿತಾ ನಾಗಭೂಷಣ, ಗಿರಿಜಮ್ಮ, ವಿಜಯಲಕ್ಷ್ಮಿ ಬಾಳೇಕುಂದ್ರಿ, ಲೀಲಾವತಿ ದೇವದಾಸ್ – ಹೀಗೆ ಹತ್ತು ಹಲವು ಲೇಖಕಿಯರೇ ಇಲ್ಲಿದ್ದಾರೆ.

ಈ ಮೊದಲು ಪ್ರಸ್ತಾಪಿಸಿದಂತೆ ಹೆಣ್ಣು ಎನ್ನುವುದನ್ನು ಜೈವಿಕ ಬದ್ಧತೆಯಿಂದ ಏಕಮುಖವಾಗಿ ಗ್ರಹಿಸಲಾಗದು. ಸ್ತ್ರೀತ್ವದ ಅನುಭವಗಳು ಸಾಮಾಜಿಕ ಪಾತಳಿಯಿಂದ ಹುಟ್ಟುವ ಜಾತಿ, ವರ್ಗ, ಸಂಸ್ಕೃತಿಗಳಿಂದ ನಿರೂಪಿಸಲ್ಪಡುತ್ತವೆ. ಅವು ಎಲ್ಲ ಸ್ತ್ರೀಯರಿಗೂ ಒಂದೇ ಆಗಿರುವುದಿಲ್ಲ. ಒಂದೇ ಪ್ರದೇಶಕ್ಕೆ ಸೇರಿದ ವೈದೇಹಿ ಮತ್ತು ಎಚ್. ನಾಗವೇಣಿಯವರ ಗ್ರಹಿಕೆಗಳು ಸಾಂಸ್ಕೃತಿಕ ನಿಶ್ಚಿತತೆಗಳಿಂದ ಭಿನ್ನವಾಗಿ ಕಾಣುತ್ತವೆ. ಮಧ್ಯಮವರ್ಗದ ಸುಶಿಕ್ಷಿತ ಪ್ರಜ್ಞೆಯು ಟಿಸಿಲಾಗಿ ಬರುತ್ತಿದ್ದ ಸ್ತ್ರೀ ಸಂವೇದನೆಗಳು ಇಂದು ಗೀತಾ ನಾಗಭೂಷಣ, ಬಿ.ಟಿ. ಜಾಹ್ನವಿ, ದು. ಸರಸ್ವತಿಯಂತಹ ಲೇಖಕಿಯರಿಂದ ಬಹುಮುಖಿತ್ವದ ನೆಲೆಗಳನ್ನು ವಿಸ್ತರಿಸಿಕೊಳ್ಳುವಂತಿದೆ. ಸುಮಂಗಲಾ ಅವರ ಕಥಾನಕಗಳು ವರ್ಗನಿಶ್ಚಿತತೆಯನ್ನು ಸೂಚಿಸುತ್ತಿದ್ದರೆ (ಅವರ ಕಥೆಗಳಲ್ಲಿ ಬರುವ ಮನೆಗೆಲಸದ ಹೆಣ್ಣುಗಳು), ಸವಿತಾ ನಾಗಭೂಷಣರ 'ಸ್ತ್ರೀ ಲೋಕ'ವು ಸ್ತ್ರೀಯರದೆಲ್ಲ ಒಂದೇ ಲೋಕ ಅಲ್ಲ, ಜೈವಿಕತೆಯೂ ಅಲ್ಲಿ

ಸಮಾನ ಅಂಶವಲ್ಲ ಎಂದು ತೋರಿಸುತ್ತದೆ. ಧರ್ಮವೆನ್ನುವ ನಿಶ್ಚಿತತೆಯನ್ನು ಸಾರಾ ಅಬೂಬಕ್ಕರ್, ಬಾನು ಮುಷ್ತಾಕ್ ತರದ ಲೇಖಕಿಯರು ಪರಿಷ್ಕರಣೆಯ ನೆಲೆಯಲ್ಲಿ ಗ್ರಹಿಸುತ್ತಾರೆ. ಪ್ರತಿರೋಧಕ ನೆಲೆಗಳಿಂದ ಹೊರಟು ಜೀವಮುಖಿಯಾಗಿಸುವ ಕಥಾನಕಗಳನ್ನು ಅವರು ನಿರೂಪಿಸುತ್ತಾರೆ. ಸಾರಾ ಅವರ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು', 'ಚಂದ್ರಗಿರಿಯ ತೀರದಲ್ಲಿ' ಕನ್ನಡದಲ್ಲಿ ಮುಸ್ಲಿಂ ಸ್ತ್ರೀ ಸಂವೇದನೆಯ ಹೊಸ ಮಗ್ಗುಲನ್ನು ತೆರೆದು ತೋರಿಸಿದವು. ಅವು ನಿಶ್ಚಿತತೆಗಳನ್ನು ನಿರೂಪಿಸುತ್ತಲೇ, ಬಹುಮುಖಿಯಾದ ಸಂವೇದನೆಗಳನ್ನು ರೂಪಿಸಿಕೊಂಡಿದ್ದು, ಕಥಾನಕಗಳಾಗಿ ಯಶಸ್ವಿಯಾಗಲು ಕಾರಣವಾಯಿತು. ಈ ರೀತಿಯಾಗಿ ಆಧುನಿಕ ಆಧುನಿಕೋತ್ತರ ಸಾಹಿತ್ಯ ರಚನೆಯಲ್ಲಿ ಸ್ತ್ರೀವಾದಿ ಸಾಹಿತ್ಯದ ಸಂವೇದನೆಯ ಹರವು ಕಾಣಬಹುದು. ಇದೊಂದು ವಿಸ್ತಾರವಾದ ಅಧ್ಯಯನ.

**ಪರಾಮರ್ಶನ ಗ್ರಂಥಗಳು:**

1. ಸೌಮ್ಯ ಎಚ್. ಎಲ್, (2023), ಇಪ್ಪತ್ತೊಂದನೆ ಶತಮಾನದಲ್ಲಿ ಸ್ತ್ರೀ ಸಂವೇದನೆ (ಸಂಪುಟ 9, ಸಂಚಿಕೆ 2), ಬೆಂಗಳೂರು: ಇಂಟರ್ ನ್ಯಾಷನಲ್ ಜರ್ನಲ್ ಆಫ್ ಕನ್ನಡ ರಿಸರ್ಚ್.
2. ಆಶಾದೇವಿ ಎಂ. ಎಸ್., (2011), ಸಾಹಿತ್ಯ ಮತ್ತು ಸ್ತ್ರೀ ಸಂವೇದನೆ ಸ್ವರೂಪ, ಗದಗ: ಲಡಾಯಿ ಪ್ರಕಾಶನ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.